# ಮಗುವಿಗಾಗಿ ತ್ರಿಕೋನ ಹೋರಾಟ!

ಅದು 1994ರ ಸಮಯ. ಮುದ್ದಾದ ಪುಟಾಣಿಯ ಜನನ. ಆದರೆ ಆಕೆಗೆ ಐದು ವರ್ಷ ತುಂಬುವಾಗಲೇ, ಎಂಟು ವರ್ಷದ ಆಕೆಯ ಅಪ್ಪ-ಅಮ್ಮಂದಿರ ದಾಂಪತ್ಯದ ಜೀವನದಲ್ಲಿ ಬಿರುಕು. 1999ರಲ್ಲಿ ವಿಚ್ಛೇದನ. ಅದೇ ಸಾಲಿನಲ್ಲಿ ಇನ್ನೊಬ್ಬರೊಡನೆ ಅಮ್ಮನ ವಿವಾಹ, ಒಂಟಿಯಾದ 'ಅಪ್ಪ'..

-ಈ ಮಗುವನ್ನು ನೋಡುವ ಅವಕಾಶವನ್ನು (ವಿಸಿಟಿಂಗ್ ರೈಟ್) ಬೆಂಗಳೂರಿನ ಕೌಟುಂಬಿಕ ಕೋರ್ಟ್ ಅಪ್ಪಂಗೆ ನೀಡಿತು. ಅಮ್ಮಂಗೆ ಇದು ಸಹಿಸಲು ಅಸಾಧ್ಯವಾಯಿತು. ಈ ಅಪ್ಪಂಗೆ ಮಗಳು ಬೇಕು, ಆ ಅಮ್ಮಂಗೆ ಇದು ನುಂಗಲಾರದ ತುತ್ತು.

ಪ್ರಕರಣ ಕೌಟುಂಬಿಕ ಕೋರ್ಟ್‌ನಿಂದ ಹೈಕೋರ್ಟ್, ಅಲ್ಲಿಂದ ಸುಪ್ರೀಂಕೋರ್ಟ್, ಪುನಃ ಕೌಟುಂಬಿಕ ಕೋರ್ಟ್ ಹೀಗೆ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಅಲೆಯುತ್ತ ಇದ್ದು, ಈ 'ವಿಸಿಟಿಂಗ್ ರೈಟ್' ವಿವಾದಕ್ಕೆ ಬರೋಬರಿ 11 ವರ್ಷ ಸಂದಿದೆ. ಈಗ ಆ ಪುಟಾಣಿ ಬಾಲಕಿಯಾಗಿ ಬೆಳೆದಿದ್ದಾಳೆ, ಆದರೆ ಸಮಸ್ಯೆ ಮಾತ್ರ ಅಲ್ಲಿಯೇ ಇದೆ.

-ಇದು ಖ್ಯಾತ ಕ್ರಿಕೆಟಿಗ ಅನಿಲ್ ಕುಂಬ್ಳೆ ಅವರ ಪತ್ನಿ ಚೇತನಾ ಕುಂಬ್ಳೆ ಹಾಗೂ ಅವರ ಮೊದಲ ಪತಿ ಕುಮಾರ್ ವಿ. ಜಹಾಗೀರ್ದಾರ್ ಅವರ ನಡುವೆ ನಡೆಯುತ್ತಿರುವ ಕಾನೂನು ಸಮರ. ಮಗುವಿಗಾಗಿ ನಡೆಯುತ್ತಿರುವ ತ್ರಿಕೋನ ಪ್ರೇಮ ಕಥೆ. ಈ ಪ್ರಕರಣ ಅನೇಕ ತಿರುವು ಪಡೆದು, ಈಗ ಸದ್ಯ ಹೈಕೋರ್ಟ್‌ನಲ್ಲಿ ಇನ್ನೂ ಇತ್ಯರ್ಥಕ್ಕೆ ಬಾಕಿ ಇದೆ.

ಇಷ್ಟು ದೀರ್ಘ ವರ್ಷದ ಕಾನೂನು ಸಮರದಲ್ಲಿ ಸಾಕಷ್ಟು ಕಲಿತಿರುವ ಜಹಾಗೀರ್ದಾರ್ ಅವರು 'ಕ್ರಿಸ್ಪ್ ಇಂಡಿಯಾ' ಎಂಬ ಸಂಘಟನೆಯೊಂದನ್ನು 2008ರ ಜೂನ್‌ನಲ್ಲಿ ಹುಟ್ಟು ಹಾಕಿದ್ದಾರೆ. ಮಗುವಿಗಾಗಿ ಹಂಬಲಿಸುತ್ತಿರುವ ಅಪ್ಪಂದಿರಿಗೆ ಕೌನ್ಸೆಲಿಂಗ್ ನೀಡುವುದು, ಅಪ್ಪಂದಿರ 'ನ್ಯಾಯ'ಕ್ಕಾಗಿ ಹೋರಾಟ ನಡೆಸುವುದು ಈ ಸಂಘಟನೆಯ ಮುಖ್ಯ ಉದ್ದೇಶ. ಈಗಾಗಲೇ ಸಂಘಕ್ಕೆ 500ಕ್ಕೂ ಅಧಿಕ ಅಪ್ಪಂದಿರು ಸದಸ್ಯರಾಗಿದ್ದಾರೆ.

## ಎಲ್ಲ ಅಪ್ಪಂದಿರಿಗೂ ಬೇಕೆ?

ಇಲ್ಲಿ ಮಹಿಳೆಯರು ಮುಂದಿಡುವ ಪ್ರಶ್ನೆಯೂ ಕುತೂಹಲಕರ. 'ಎಷ್ಟು ಮಂದಿ ಅಪ್ಪಂದಿರು ಹೀಗೆ ಇದ್ದಾರೆ? ವಿಚ್ಛೇದನಗೊಂಡ ಪ್ರಕರಣಗಳಲ್ಲಿ, ಎಷ್ಟು ಅಪ್ಪಂದಿರು ತಮ್ಮ ಬಳಿಯೇ ಮಕ್ಕಳನ್ನು ಇಟ್ಟುಕೊಂಡು ಪೋಷಿಸಲು ತಯಾರಿದ್ದಾರೆ?' ಎನ್ನುವುದು ಮಹಿಳೆಯರು ಕೇಳುವ ಪ್ರಶ್ನೆ.

ಬೆಂಗಳೂರಿನ ರಾಜಿಸಂಧಾನ ಕೇಂದ್ರದಲ್ಲಿ ರಾಜಿಸಂಧಾನಕಾರರಾಗಿರುವ ಸುಶೀಲಾ ಹೇಳುವ ಪ್ರಕಾರ, 'ಗಂಡನಿಂದ ಹಿಂಸೆ ಅನುಭವಿಸಿ ವಿಚ್ಛೇದನ ಪಡೆದ ಬಹುತೇಕ ಮಹಿಳೆಯರು, ಮಕ್ಕಳಿದ್ದರೆ ಇನ್ನೊಂದು ವಿವಾಹವಾಗಲು ಬಯಸುವುದಿಲ್ಲ. ತಾನು ಅನುಭವಿಸಿದ ಕಹಿ ನೆನಪು ಒಂದು ಕಾರಣವಾದರೆ, ತನ್ನ ಮಕ್ಕಳಿಗೆ 'ಅಪ್ಪ' ಆಗುವ ವ್ಯಕ್ತಿ ಬರಲಾರ ಎನ್ನೋದು ಇನ್ನೊಂದು ಕಾರಣ. ಒಬ್ಬ ಹೆಣ್ಣು ಗಂಡಸಿನ ಆಸರೆ, ಆತನ ಸಂಪರ್ಕ ಇಲ್ಲದೇ ಇರಬಲ್ಲಳು. ಆದರೆ ಗಂಡಸು ಹಾಗಲ್ಲ. ಆತನಿಗೆ ಹೆಣ್ಣಿನ ಸಂಗ ಇಲ್ಲದೇ ಇರುವುದು ಬಹಳ ಕಷ್ಟ. ಅದಕ್ಕೆ ಮಗು ಅಡ್ಡಿಯಾಗುವ ಭಯ ಆತನಿಗೆ ಇದ್ದೇ ಇರುತ್ತದೆ. ಬೇರೊಬ್ಬ ಹೆಣ್ಣು ಆತನಿಗೆ ಪತ್ನಿಯಾಗಬಹುದು ವಿನಾ ಪತಿಯ ಮಗುವಿಗೆ 'ತಾಯಿ' ಆಗುವುದು ಕಷ್ಟದ ಮಾತು. ಇದೇ ಕಾರಣಕ್ಕೆ ಆತ ಮಗುವಿನ ಜವಾಬ್ದಾರಿ ತನ್ನ ಮೇಲೆ ಹಾಕಿಕೊಳ್ಳಲು ಬಯಸುವುದಿಲ್ಲ.'

ಇದಕ್ಕೆ ವಕೀಲೆ ಪದ್ಮಜಾ ಸಹಮತ ಕೂಡ ಇದೆ. 'ಪುರುಷರಿಗೆ ಹೆತ್ತ ಮಕ್ಕಳ ಮೇಲೆ ಪ್ರೀತಿ ಸಹಜ. ಆದರೆ ವಿಚ್ಛೇದನದ ನಂತರ ಸಂಪೂರ್ಣ ಜವಾಬ್ದಾರಿ, ಅದರ ಲಾಲನೆ, ಪಾಲನೆ, ಶಿಕ್ಷಣ, ವಿವಾಹ ಇತ್ಯಾದಿಗಳನ್ನು ನೋಡಿಕೊಳ್ಳುವುದನ್ನು ಆತ ಮಾಡಲಾರ. ವಿಚ್ಛೇದಿತ ಪತ್ನಿಯ ಬಳಿ ಇರುವ ಮಗುವನ್ನು ಆಗೊಮ್ಮೆ- ಈಗೊಮ್ಮೆ ನೋಡುವ ಇಚ್ಛೆ ಆತನಿಗೆ ಇರಬಹುದು. ಇದನ್ನೆಲ್ಲ ಗಣನೆಗೆ ತೆಗೆದುಕೊಂಡು ನ್ಯಾಯಾಲಯಗಳು ಅಮ್ಮಂದಿರ ಸುಪರ್ದಿಗೆ ಮಗುವನ್ನು ಒಪ್ಪಿಸುತ್ತದೆ. ಅಪ್ಪ ಕೂಡ ಮಗುವಿನ ಪ್ರೀತಿಯಿಂದ ವಂಚಿತ ಆಗಬಾರದು ಎಂಬ ಕಾರಣದಿಂದ ಅಪ್ಪಂದಿರಿಗೆ ಸಂದರ್ಶನದ ಹಕ್ಕನ್ನು ನ್ಯಾಯಾಲಯ ನೀಡುತ್ತದೆ' ಎನ್ನುತ್ತಾರೆ ಅವರು.

## ಮಕ್ಕಳು ಏನನ್ನುತ್ತಾರೆ?

ಮಕ್ಕಳ ಬಗ್ಗೆ ಅಪ್ಪ-ಅಮ್ಮಂದಿರಲ್ಲಿ ಹೇಗೆ ವಿಭಿನ್ನ ಅಭಿಪ್ರಾಯಗಳು ಇವೆಯೋ ಹಾಗೆಯೇ ಮಕ್ಕಳಿಗೂ ತಮ್ಮ ಪೋಷಕರ ಬಗ್ಗೆ ಇದೇ ರೀತಿಯ ವಿಭಿನ್ನ ನಿಲುವು ಇದೆ. ಬೆಂಗಳೂರಿನ ಪ್ರಸಿದ್ಧ ಸುಮಂಗಲಿ ಸೇವಾಶ್ರಮ ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಇರುವ 'ಮಾಯಾ'ದಲ್ಲಿ ವಾಸವಾಗಿರುವ 'ಸಿಂಗಲ್ ಪೇರೆಂಟಿಂಗ್' ಮಕ್ಕಳನ್ನು ಮಾತನಾಡಿಸಿದಾಗ ಈ ಅಭಿಪ್ರಾಯ ತಿಳಿದುಬಂತು.

ಹಲ ಮಕ್ಕಳು ಅಪ್ಪಂದಿರ ಕ್ರೂರ ರೂಪ ನೋಡಿ ಬೇಸತ್ತಿದ್ದರೆ, ಕೆಲವರು ಅಪ್ಪನ ಪ್ರೀತಿಗಾಗಿ ಹಂಬಲಿಸುತ್ತಿರುವುದು ಇಲ್ಲಿ ಮಾಮೂಲು.

'ನನಗೆ ನನ್ನ ಅಪ್ಪ ಬೇಕು ಎಂದೇನೂ ಅನಿಸಲ್ಲಪ್ಪ. ನನ್ ಅಮ್ಮನಿಗೆ ಅವನು ಕೊಡುತ್ತಿದ್ದ ಹಿಂಸೆಯನ್ನು ಕಣ್ಣಾರೆ ನೋಡಿದೀನಿ ನಾನು. ಆತನೊಬ್ಬ ದೊಡ್ಡ ಕುಡುಕ. ನನ್ನಮ್ಮ ಅವರಿವರ ಮನೆಯಲ್ಲಿ ಕಸ ಮುಸುರೆ ತೊಳೆದು ಒಂದಿಷ್ಟು ಹಣ ಕೂಡಿ ಇಡ್ತಾ ಇದ್ಲು. ನನ್ನಪ್ಪ ಅವಳನ್ನ ಚೆನ್ನಾಗಿ ಹೊಡೆದು ಹಣ ತಗೊಂಡು ಹೋಗ್ತಾ ಇದ್ದ. ಇದನ್ನು ಸಹಿಸ್ಲಿಕ್ಕೆ ಆಗ್ದೆ ನನ್ನಮ್ಮ ರಾತ್ರಿ ನನ್ನನ್ನ ಕರ್ಕೊಂಡು ಮನೆ ಬಿಟ್ಟು ಬಂದ್ ಬಿಟ್ಲು. ಈ ಆಶ್ರಮಕ್ಕೆ ತಂದು ಬಿಟ್ಟಿದ್ದಾಳೆ. ಅವ್ಳು ಅಲ್ಲಿ ಇಲ್ಲಿ ಕೂಲಿ ನಾಲಿ ಮಾಡ್ತಾಳೆ. ನನ್ ಅಪ್ಪ ಏನಾದ್ನೋ ಗೊತ್ತಿಲ್ಲ. ನಾನು ಇಲ್ಲಿ ಚೆನ್ನಾಗಿ ಓದ್ತಾ ಇದ್ದೇನೆ' ಎನ್ನುತ್ತಾಳೆ 12 ವರ್ಷದ ಬಾಲಕಿ ರೇಖಾ.

ಆದರೆ ಇದಕ್ಕೆ ವ್ಯತಿರಿಕ್ತ ಹೇಳಿಕೆ ಒಂಬತ್ತರ ಹರೆಯದ್ದ ಸೀಮಾಳದ್ದು. 'ನನ್ನ ಜೀವನದ ಒಂದೇ ಒಂದು ಗುರಿ ಅಪ್ಪ- ಅವ್ವನ್ನ ಒಟ್ಟಿಗೆ ಸೇರಿಸೋದು. ಯಾವುದ್ಯಾವುದೋ ಹೆಣ್ ಮಕ್ಳನ್ನು ಮನೆಗೆ ಕರ್‌ಕೊಂಡು ಬರ್‍ತಿದ್ದ ನನ್ ಅಪ್ಪ. ಇದ್ಕೆ ಅವ್ವ ಅಪ್ಪ ದಿನವೂ ಜಗ್ಳ ಮಾಡ್ತಾ ಇದ್ರು. ನನ್ ಅವ್ವ ಒಂದ್ ದಿನ ಬೆಂಕಿ ಹಚ್ಕೊಂಡ್ ಬಿಟ್ಳು. ಅಪ್ಪ ಆಸ್ಪತ್ರೆಗೂ ಬರ್‍ಲ್ಲೇ ಇಲ್ಲ. ನನ್ನ ಅವ್ವ ಮನೆ ಬಿಟ್ ಬಂದ್ಳು. ಅಪ್ಪನ್ ನೆನೆಸ್‌ಕೊಂಡು ದಿನವೂ ಅಳ್ತಾಳೆ. ಈಗ ನನ್ನ ಅಪ್ಪ ಯಾರ ಜೊತೆ ಇದ್ದಾನೋ, ಹೇಗೆ ಇದ್ದಾನೋ ಗೊತ್ತಿಲ್ಲ. ಆದರೂ ನನಗೆ ಇಬ್ಬರನ್ನೂ ಒಟ್ಟಿಗೆ ಸೇರಿಸೋ ಆಸೆ. ಅದನ್ನು ಈಡೇರಿಸಿಯೇ ತೀರುತ್ತೇನೆ' ಎನ್ನುವುದು ಈ ಪುಟ್ಟ ಬಾಲಕಿಯ ದಿಟ್ಟ ಮಾತು.

ಇನ್ನು ಮೈಸೂರಿನ ಸೇವಾಶ್ರಮದಲ್ಲಿ ವಾಸಿಸುತ್ತಿರುವ ಪುಟಾಣಿ ಜಾಹ್ನವಿ ನೆನಪು ಮಾಡಿಕೊಳ್ಳೋದು ಹೀಗೆ- 'ಮಮ್ಮಿ-ಡ್ಯಾಡಿ ಇಬ್ರೂ ಜಾಬ್ ಮಾಡ್ತಾರೆ. ಡ್ಯಾಡಿ ಅದ್ಯಾಕೋ ಗೊತ್ತಿಲ್ಲ. ಬರಿ ಮಮ್ಮೀನ ಬಯ್ತಾನೇ ಇರ್‍ತಿದ್ರು. ಮಮ್ಮಿಗೆ ತುಂಬಾ ಟಾರ್ಚರ್ ಕೊಡ್ತಿದ್ರು. ಆಫೀಸ್ ಕೆಲ್ಸ, ಮನೆ ಕೆಲ್ಸ ಎರಡೂ ಮಾಡಿ ಮಾಡಿ ಮಮ್ಮಿ ಸುಸ್ತಾಗ್ತಿದ್ಲು. ಆದ್ರೆ ಡ್ಯಾಡಿ ಮಾತ್ರ ಛೀ.. ಅದ್ಯಾರ್‍ಯಾರೋ ಹುಡುಗೀರನ್ನ ಮನೆಗೆ ಕರ್ಕೊಂಡು ಬರ್‍ತಿದ್ರು. ಎಷ್ಟೋ ದಿನ ಡ್ಯಾಡಿ ಮನೆಗೆ ಬರ್‍ತಾನೇ ಇರಲಿಲ್ಲ. ಮಮ್ಮಿ ದಿನವೂ ಅಳುತ್ತಿದ್ಲು. ನಾನು ಯಾಕೆ ಅಳ್ತಿ ಎಂದು ಕೇಳಿದ್ರೆ ಏನೂ ಹೇಳ್ತಾ ಇರಲಿಲ್ಲ ಅವಳು. ಅಂತೂ ಒಂದ್ ದಿನ ನನ್ನ ಮಮ್ಮಿ ನನ್ನೆ ಕರೆದು, 'ನಿನಗೆ ಡ್ಯಾಡಿ ಬೇಕೋ, ನಾನು ಬೇಕೋ' ಅಂತ ಕೇಳಿದ್ಲು. ನನ್ಗೆ ಬಹಳ ಆಶ್ಚರ್ಯ ಆಯ್ತು. ಇಬ್ಬರೂ ಬೇಕು ಎಂದೆ. ಆದ್ರೆ ಮಮ್ಮಿ ಇಬ್ಬರೂ ಇನ್ ಮುಂದೆ ನಿನಗೆ ಸಿಗಲ್ಲ. ಒಬ್ಬರನ್ನೇ ಹೇಳ್‌ಬೇಕು ಅಂದ್ಲು.

ಅದ್ಕೆ ನಾನು 'ನೀನೆ ನನ್ಗೆ ಬೇಕು' ಅಂದೆ. ಸರಿ ಅಂತ ಮಮ್ಮಿ ನನ್ನನ್ನು ಜೊತೆಗೆ ಕರ್ಕೊಂಡು ಅಜ್ಜಿ ಮನೆಗೆ ಹೋದಳು. ಈಗ 3-4 ವರ್ಷ ಆಯ್ತು. ನಾನು ಡ್ಯಾಡಿ ಮುಖ ನೋಡಿಲ್ಲ. ಮಮ್ಮಿಗೆ ಕೇಳಿದ್ರೆ ಅವಳು ಏನೂ ಹೇಳಲ್ಲ. ಡ್ಯಾಡಿ ಬಹಳ ದೂರ ಹೋಗಿದ್ದಾರೆ ಅಂತ ಮಾತ್ರ ಹೇಳ್ತಾಳೆ. ನಾನು ಡ್ಯಾಡಿ ಬಗ್ಗೆ ಕೇಳಿದ್ರೆ ಬಹಳ ಬೇಜಾರು ಮಾಡ್ಕೊತಾಳೆ. ಅದ್ಕೆ ನಾನು ಕೇಳೋದನ್ನೆ ಬಿಟ್ ಬಿಟ್ಟಿದ್ದೇನೆ. ಡ್ಯಾಡಿ ಇಲ್ಲ ಎನ್ನೋದನ್ನು ಮರೆಸುವಷ್ಟು ಪ್ರೀತಿ ನನ್ ಮಮ್ಮಿ ಮಾಡ್ತಾಳೆ. ಆದ್ರೆ ಆವಾಗಾವಾಗ ಡ್ಯಾಡಿ ನೆನಪು ಮಾತ್ರ ಆಗ್ತಾನೆ ಇರತ್ತೆ."

ಇಂತಹ ಮಕ್ಕಳ ಮನಸ್ಸನ್ನು ಅರಿತಿರುವ ಬೆಂಗಳೂರಿನ ಸುಮಂಗಲಿ ಸೇವಾಶ್ರಮದ ರೂವಾರಿ ಸುಶೀಲಮ್ಮ ಹೇಳುತ್ತಾರೆ- 'ಸಿಂಗಲ್ ಪೇರೆಂಟಿಂಗ್ ಎನ್ನುವುದು ಈಚಿನ ದಿನಗಳಲ್ಲಿ ಮಾಮೂಲಾಗಿದೆ. ಪ್ರತಿಷ್ಠಿತ ಕುಟುಂಬದವರು ಕ್ಷುಲ್ಲಕ ಕಾರಣಕ್ಕೆ ಬೇರ್ಪಡುತ್ತಿದ್ದಾರೆ. ಆದರೆ ಈ ಆಶ್ರಮದಲ್ಲಿ ನೆಲೆಸಿರುವ ಮಕ್ಕಳು ಬಡ ಕುಟುಂಬದಿಂದ ಬಂದವರು. ಕುಡುಕ ಅಪ್ಪನಿಂದ ದೂರ ಆಗಿರುವ ಅಮ್ಮಂದಿರು ಇಲ್ಲಿ ನೆಲೆ ಹುಡುಕಿ ಬಂದಿದ್ದಾರೆ. ಇಲ್ಲಿ ಅವರಿಗೆ ಶಿಕ್ಷಣ ನೀಡಿ ಅವರ ಕಾಲ ಮೇಲೆ ನಿಲ್ಲಿಸುತ್ತೇವೆ. ಆದರೆ ಇಲ್ಲಿ ಬಂದಿರುವ ಮಕ್ಕಳ ಪೈಕಿ ಬಹುತೇಕ ಅಪ್ಪಂದಿರಿಗೆ ಮಕ್ಕಳು ಇಲ್ಲಿರುವುದು ತಿಳಿದಿದೆ. ಆದರೆ ಇದುವರೆಗೆ ಮಕ್ಕಳನ್ನು ಕರೆದುಕೊಂಡು ಹೋಗುತ್ತೇನೆಂದು ಮುಂದೆ ಬಂದ ಅಪ್ಪಂದಿರ ಸಂಖ್ಯೆ ಬಹಳ ವಿರಳ.'

'ಐ.ಟಿ. ಬಿ.ಟಿ ಎಂದರೆ ವಿಚ್ಛೇದನಕ್ಕೆ ಇನ್ನೊಂದು ಹೆಸರು' ಎನ್ನುವುದು ಈಗಿನ ಸಾಮಾನ್ಯ ಆರೋಪ. ಆದರೆ ಈ ಆಶ್ರಮಗಳಲ್ಲಿ ಇರುವ ಮಕ್ಕಳನ್ನು ನೋಡಿದರೆ ಕೂಲಿಕಾರ ಮಕ್ಕಳೇ ಇಂತಹ ನೋವಿಗೆ ಹೆಚ್ಚು ಗುರಿಯಾಗಿರುವುದು ತಿಳಿಯುತ್ತದೆ. ಬಡವರ ಮನೆಯಲ್ಲಿ ಕುಡಿತ ಮನೆ ಹಾಳುಗೆಡವಿದರೆ, ಐಟಿ, ಬಿ.ಟಿ ಮಂದಿಯಲ್ಲಿ 'ಪ್ರತಿಷ್ಠೆ' ಮಧ್ಯೆ ಪ್ರವೇಶಿಸುತ್ತದೆ- ಅಷ್ಟೇ ವ್ಯತ್ಯಾಸ. ಆದರೆ ಎಲ್ಲದಕ್ಕೂ ಬಲಿಯಾಗುವುದು ಮಕ್ಕಳು ಎಂಬುದು ಮಾತ್ರ ಶೋಚನೀಯ.